## ಆಂಜನೇಯನಿಗೆ ಮಾಸ್ಕ್!


ಮನೆಯಲ್ಲಿ ಹಟ ಮಾಡುತ್ತಿದ್ದ ಐದೂವರೆ ವರ್ಷದ ಪೋರನನ್ನು ಹೊರಗೆ ಸುತ್ತಾಡಿಸಿಕೊಂಡು ಬರಲು ಕರೆದೊಯ್ದೆ. ಆಗಷ್ಟೇ ಹೊಲದಿಂದ ಹಿಂತಿರುಗುತ್ತಿದ್ದ ಎತ್ತುಗಳ ಬಾಯಿಗೆ ಹಾಕಿರುವ 'ಮಗಟ'(ಕೆಲಸದ ವೇಳೆ ಎತ್ತುಗಳು, ಬೆಳೆಗೆ ಬಾಯಿ ಹಾಕದಂತೆ ಹೆಣೆದಿರುವ ದುಂಡನೆಯ ವಸ್ತು)ವನ್ನು ನೋಡಿ, 'ಎತ್ತುಗಳೂ ಮಾಸ್ಕ್ ಹಾಕಿಕೊಂಡಿವೆ' ಎಂದ. ಅವನ ಮಾತಿಗೆ ನಕ್ಕು, ಮುಂದೆ ಆಂಜನೇಯನ ಗುಡಿಗೆ ಹೋದೆವು. ಕೆಲ ನಿಮಿಷಗಳ ಕಾಲ ದೇವರ ಮೂರ್ತಿಯನ್ನು ಗಮನಿಸಿದ ಪೋರ, 'ಪಾಪ, ಹನುಮಂತನಿಗೆ ಬಿಗಿಯಾದ ಮಾಸ್ಕ್ ಹಾಕಿ ಮುಖ ಹೇಗೆ ಊದಿಕೊಂಡಿದೆ ನೋಡಿ...' ಎಂದಾಗ ಮೂರ್ಛೆ ಹೋಗುವ ಸರದಿ ಅರ್ಚಕರದ್ದಾಗಿತ್ತು.



**ಮಹೇಶ್ವರ ಹುರುಕಡ್ಲಿ**

## ನಮ್ಮ ಕೈಯಲ್ಲಿ ಏನಿದೆ?

ನಮ್ಮ ಸಂಬಂಧದಲ್ಲಿ ಹಿರಿಯರೊಬ್ಬರು ಇತ್ತೀಚೆಗೆ ತೀರಿಕೊಂಡಿದ್ದರು. ಲಾಕ್‌ಡೌನ್ ಸಮಯವಾದ್ದರಿಂದ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ. ಹಾಗಾಗಿ ನಂತರ ಅವರ ಮನೆಯವರನ್ನು ಮಾತಾಡಿಸಿಕೊಂಡು ಬರೋಣವೆಂದು ಹೋಗಿದ್ದೆವು. ನಾವು ಹೋದ ಸಮಯಕ್ಕೆ ಬೇರೊಂದು ಊರಿನವರು ಕೂಡಾ ಬಂದಿದ್ದರು. 'ಇಷ್ಟು ಬೇಗ ಸಾಯಬಾರದಿತ್ತು ಅಂತ ನಾವೆಲ್ಲಾ ಅಂದುಕೊಳ್ತೀವಿ. ಆದರೆ ಹಣೆಬರಹದಲ್ಲಿ ಹಾಗೆ ಬರೆದಿರುವಾಗ ಏನು ಮಾಡುವುದು? ಎಲ್ಲ ಭಗವಂತನ ಇಚ್ಛೆ. ನಮ್ಮ ಕೈಯಲ್ಲಿ ಏನಿದೆ?' ಎಂದು ಗಂಭೀರವಾಗಿ ಅಜ್ಜಿಯೊಬ್ಬರು ಹೇಳುತಿದ್ದರೆ ಅವರ ಮೊಮ್ಮಗಳು, 'ನಮ್ಮ ಕೈಯಲ್ಲಿ ಮೊಬೈಲ್ ಇದೆ' ಎಂದಳು. ಅಂತಹ ಗಂಭೀರ ಸಮಯದಲ್ಲಿಯೂ ಎಲ್ಲರೂ ಜೋರಾಗಿ ನಗತೊಡಗಿದರು.



**ಶಿವಲೀಲಾ ಸೊಪ್ಪಿಮಠ**